**ಸಾಕ್ಷಿಯನ್ನು ದಿ:04.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತನ್ನು ಮೊದಲು ನನ್ನ ಪತಿ ಉಳುತ್ತಿದ್ದರು. ಈಗ ನನ್ನ ಮೈದುನರು ಉಳುತ್ತಿದ್ದಾರೆ.

2. ದಾವಾ ಸ್ವತ್ತು ಹಾಗೂ ಇತರ ಸ್ವತ್ತುಗಳು ಎಂ.ಆರ್.42/1989 ರಂತೆ ನಿಮ್ಮ ಮಾವನಿಗೆ ಬಂದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ.

3. ನೀವು ದಾವಾ ಸ್ವತ್ತಿಗೆ ತಪ್ಪು ಚಕ್ಕುಬಂದಿ ನೀಡಿ ದಾವೆ ಹಾಕಿದ್ದು, ನಿಮಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಗಳು ಯಾವ ದಿನಾಂಕ ತೊಂದರೆ ನೀಡಿದ್ದಾರೆ ಎಂದರೆ, ನಮ್ಮ ಹೆಸರಿಗೆ ಪಹಣಿ ಆದಾಗ ತೊಂದರೆ ಕೊಡಲು ಪ್ರಾರಂಭಿಸಿದರು. ಆ ಬಗ್ಗೆ ಯಾವುದೇ ಪಂಚಾಯತಿ ನಾವು ಹೋಗಿಲ್ಲ. ಪ್ರತಿವಾದಿಗಳ ವಿರುದ್ಧ ನಾವು ಯಾವುದೇ ದೂರು ನೀಡಿಲ್ಲ.

5. ದಾವಾ ಸ್ವತ್ತು ನನ್ನ ಪತಿಯ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇವೆ.

6. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಹಾಗೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

7. ನಿಮ್ಮ ಪತಿಯ ಅವರ ಸಹೋದರರಿಗೆ ಮೋಸ ಮಾಡಿ ಅವರಿಗೆ ಗೊತ್ತಿಲ್ಲದಂತೆ ನಿಮ್ಮ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

8. ನಿಮ್ಮ ಮಾವ ಬದುಕಿದ್ದಾಗ ಅವರ ಹಿರಿಮಗನಾದ ನಿಮ್ಮ ಪತಿಗೆ, ನನಗೆ ವಯಸ್ಸಾದ ಕಾರಣ ನೀನು ಹಿರಿಯ ಮಗ ಆದ್ದರಿಂದ ನಿನ್ನ ಹೆಸರಿನಲ್ಲಿ ಇರಲಿ, ಉಳಿದವರು ವಯಸ್ಕರಾದ ನಂತರ ಅವರಿಗೆ ಭಾಗ ಮಾಡಿಕೊಡುವಂತೆ ಹೇಳಿ ಅವರ ಹೆಸರಿಗೆ ಮಾಡಿದ್ದರು ಎಂದರೆ, ಸರಿಯಲ್ಲ.

9. ದಾವಾ ಸ್ವತ್ತು ಹಾಗೂ ಇತರೇ ಸ್ವತ್ತುಗಳಲ್ಲ ಭಾಗ ಕೋರಿ ಪ್ರತಿವಾದಿಯು ನಿಮ್ಮ ಹಾಗೂ ನಿಮ್ಮ ಪತಿ ವಿರುದ್ಧ ಅ.ದಾ.ನಂ.123/2014 ರಂತೆ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ನೀವಾಗಲಿ ನಿಮ್ಮ ಪತಿಯಾಗಲೀ ತಕರಾರು ಹಾಕಿಲ್ಲ ಎಂದರೆ ಸರಿ.

10. ದಾವಾ ಸ್ವತ್ತನ್ನು ನೀವು ಉಳುಮೆ ಮಾಡಿದ್ದನ್ನು ನೋಡಿದವರು ಇದ್ದಾರಾ ಎಂದರೆ, ಈಗ 3 ವರ್ಷದಿಂದ ನಮಗೆ ಉಳುಮೆ ಮಾಡಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ.

11. ನೀವು ಹಾಗೂ ನಿಮ್ಮ ಪತಿ ಪ್ರತಿವಾದಿಗಳಿಗೆ ಕಿರುಕುಳ ನೀಡಲು ಈ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

12. ಈ ದಾವೆಯಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ